ಕರ್ನಾಟಕ ವಿಧಾನ ಸಭೆ, ಸಂಶೋಧನಾ ಹಾಗೂ ಉಲ್ಲೇಖನಾ ಶಾಖೆ
KARNATAKA LEGISLATIVE ASSEMBLY RESEARCH AND REFERENCE BRANCH
ಪತ್ರಿಕಾ ತುಣುಕುಗಳು
PAPER CLIPPINGS
ಇಲಾಖೆ / ವಿಷಯ: DEPARTMENT / SUBJECT:
ಪತ್ರಿಕೆಯ ಹೆಸರು : NAME OF THE NEWS PAPER :
ದಿನಾಂಕ : DATE : 30/07/2019

# ಯಾರಿಗೆ ವಿಧಾನ ಪರಿಷತ್ ಸಭಾನಾಯಕ ಸ್ಥಾನದ ಅದೃಷ್ಟ?

## ಶ್ರೀನಿವಾಸ್ ಪೂಜಾರಿ, ಆಯನೂರು ನಡುವೆ ಪೈಪೋಟಿ

■ **ವಿಕ ಸುದ್ದಿಲೋಕ** ಬೆಂಗಳೂರು

ಸಮ್ಮಿಶ್ರ ಸರಕಾರ ತೆರೆಮರೆಗೆ ಸರಿದು ಬಿಜೆಪಿ ಸರಕಾರ ಅಧಿಕಾರಕ್ಕೇರುತ್ತಿದ್ದಂತೆ ವಿಧಾನ ಪರಿಷತ್‌ನಲ್ಲಿ ಸಭಾನಾಯಕ ಯಾರು ಎಂಬುದು ಕುತೂಹಲ ಕೆರಳಿಸಿದೆ.

ಸೋಮವಾರ ಮೇಲ್ಮನೆ ಕಲಾಪ ನಡೆದ ವೇಳೆ ಆಡಳಿತ ಪಕ್ಷದ ನಾಯಕ ಹಾಗೂ ಪ್ರತಿಪಕ್ಷ ನಾಯಕರ ಆಸನವು ಖಾಲಿ ಇತ್ತು. ಇದೇ ಮೊದಲ ಬಾರಿಗೆ ಎರಡೂ ಪ್ರಮುಖ ಸ್ಥಾನಗಳಲ್ಲಿ ಯಾರೊಬ್ಬರೂ ಕೂರದೆ ಕಲಾಪ ನಡೆದಿದ್ದು ವಿಶೇಷ.

ಯಡಿಯೂರಪ್ಪ ಒಬ್ಬರೇ ಸಿಎಂ ಆಗಿ ಅಧಿಕಾರ ಸ್ವೀಕರಿಸಿದ್ದರಿಂದ ಮೇಲ್ಮನೆಯ ಸಭಾನಾಯಕ ಸ್ಥಾನಕ್ಕೆ ಯಾರನ್ನೂ ನೇಮಿಸಿಲ್ಲ. ಮೇಲ್ಮನೆಯಲ್ಲಿ ಸಭಾನಾಯಕ ಸ್ಥಾನ ಅಲಂಕರಿಸುವ ವ್ಯಕ್ತಿ ಸಚಿವ ಆಗಿರಬೇಕೆಂಬ ನಿಯಮ ಇದೆ.

ಹೀಗಾಗಿ ಸಿಎಂ ತಮ್ಮ ಸಂಪುಟವನ್ನು ವಿಸ್ತರಿಸುವ ವೇಳೆ ಮೇಲ್ಮನೆಯ ಸದಸ್ಯರೊಬ್ಬರಿಗೆ ಸಚಿವ ಸ್ಥಾನ ನೀಡುವುದು ಖಚಿತ. ಪೂಜಾರಿ ಅವರು ಈ ಹಿಂದೆ ಸಚಿವರಾಗಿದ್ದವರು. ಹಿಂದಿನ ಸರಕಾರದಲ್ಲಿ ಪ್ರತಿಪಕ್ಷ ನಾಯಕರಾಗಿಯೂ ಕಾರ್ಯನಿರ್ವಹಿಸಿರುವುದರಿಂದ ಸಭಾನಾಯಕ ಸ್ಥಾನಕ್ಕೂ ಆಯ್ಕೆ ಮಾಡಬೇಕೆಂಬ ಇರಾದೆ ಪಕ್ಷದಲ್ಲಿದೆ.

ಇತ್ತ ಆಯನೂರು ಕೂಡ ಸಂಸದರಾಗಿ ಹೆಸರು ಮಾಡಿದ್ದು, ಹಿರಿತನ ಆಧರಿಸಿ ಹೊಸ ಹುದ್ದೆ ನೀಡಿದರೆ ನಿರ್ವಹಿಸಲು ಸಿದ್ಧ ಎಂಬ ಸಂದೇಶ ರವಾನಿಸಿದ್ದಾರೆ. ಆದರೆ, ಆಯನೂರು ಅವರು ಶಿವಮೊಗ್ಗ ಜಿಲ್ಲೆಗೆ ಸೇರಿದ್ದು, ಸಚಿವ ಸ್ಥಾನ ನೀಡಿದರೆ ಸಂಪುಟದಲ್ಲಿ ಸಿಎಂ ತವರು ಜಿಲ್ಲೆಗೆ ಹೆಚ್ಚಿನ ಪ್ರಾತಿನಿಧ್ಯ ನೀಡಿದಂತಾಗುತ್ತದೆ. ಜತೆಗೆ ಶಾಸಕ ಈಶ್ವರಪ್ಪ ಕೂಡ ಸಚಿವ ಆಕಾಂಕ್ಷಿಯಾಗಿದ್ದು, ಸಭಾನಾಯಕನ ಸ್ಥಾನವೂ ಶಿವಮೊಗ್ಗ ಜಿಲ್ಲೆಯವರ ಪಾಲಾದರೆ ಇತರರಿಗೆ ಮಂತ್ರಿ ಸ್ಥಾನ ನೀಡಲು ತೊಡಕುಂಟಾಗಲಿದೆ ಎಂಬ ಜಿಜ್ಞಾಸೆ ಎದ್ದಿದೆ.

ಇದಕ್ಕಿಂತ ಮುಖ್ಯವಾಗಿ ಪೂಜಾರಿ ಅವರ ಸದಸ್ಯತ್ವ ಅವಧಿ 2022ರ ಜ.5ರಂದು ಕೊನೆಗೊಳ್ಳುತ್ತದೆ. ಆಯನೂರು 2024ರ ಜೂ.16ರ ವರೆಗೂ ಸದಸ್ಯರಾಗಿರುತ್ತಾರೆ. ಹೀಗಾಗಿ ಪೂಜಾರಿ ಸದಸ್ಯತ್ವ ಅವಧಿ ಮೊದಲು ಮುಗಿಯುವುದರಿಂದ ಅವರನ್ನೇ ಮೊದಲು ಸಭಾನಾಯಕರನ್ನಾಗಿ ಮಾಡಿ ನಂತರ ಆಯನೂರಿಗೆ ನೀಡುವ ಕುರಿತು ಪಕ್ಷದಲ್ಲಿ ಚರ್ಚೆ ನಡೆದಿದೆ. ಈ ಸಮಸ್ಯೆಯನ್ನು ನಿವಾರಿಸಿಕೊಳ್ಳಲು ರಾಜ್ಯ ಬಿಜೆಪಿ ಮುಖಂಡರು ಹೈಕಮಾಂಡ್ ಮೊರೆ ಹೋಗುವ ಸಾಧ್ಯತೆ ಹೆಚ್ಚಿದೆ.



■ ಉಡುಪಿ ಜಿಲ್ಲೆ
■ ಸಚಿವರಾಗಿದ್ದರು
■ ಹಾಲಿ ಪ್ರತಿಪಕ್ಷ ನಾಯಕ



■ ಶಿವಮೊಗ್ಗ ಜಿಲ್ಲೆ
■ ಸಂಸದರಾಗಿದ್ದರು
■ ಪಕ್ಷದ ವಕ್ತಾರರಾಗಿ ಕೆಲಸ